**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**

**ಕೊಡಗು, ಮಡಿಕೇರಿ.**

**ಸ್ಪೆಷಲ್ ಕೇಸ್ ನಂ. 54/2019**

ಪ್ರಾಸಾ : **3**

ಚಾಸಾ : **4**

| | | |
|---|---|---|
| ಸಾಕ್ಷಿದಾರರ ಹೆಸರು | : | ಎಂ.ಕೆ. ಮಣಿಕಂಠ |
| ತಂದೆಯ ಹೆಸರು | : | ಚೆನ್ನರಾಜು |
| ವಯಸ್ಸು | : | 22 ವರ್ಷ |
| ವೃತ್ತಿ | : | ಕೂಲಿ ಕೆಲಸ |
| ವಾಸ | : | ಅಬ್ಬೂರುಕಟ್ಟೆ ಗ್ರಾಮ, ಸೋಮವಾರಪೇಟೆ. |

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ **16.09.2021**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದಃ**

ಪ್ರಾಸಾ-1, 2, ಚಾಸಾ-3 ರವರು ಗೊತ್ತು.

ದಿನಾಂಕಃ20.10.2019 ರಂದು ನಾನು ಚಾಸಾ-5 ರವರ ಅಂಗಡಿಯ ಬಳಿ ಇದ್ದಾಗ ಅಲ್ಲಿಗೆ ಪ್ರಾಸಾ-1 ರವರು ತನ್ನ ಬಾಬ್ತು ಬುಲೆಟ್ ಬೈಕಿನಲ್ಲಿ ಸುಮಾರು ಸಂಜೆ 7.00 ಗಂಟೆ ಸಮಯಕ್ಕೆ ಅಲ್ಲಿಗೆ ಬಂದರು. ನಂತರ ಅವರು ಆರೋಪಿಗೆ ತನ್ನ ಮೊಬೈಲ್ ನಿಂದ ಕರೆ ಮಾಡಿ ಚಾಸಾ-5 ರವರ ಅಂಗಡಿ ಬಳಿ ಬರುವಂತೆ ಕರೆದರು. ನಂತರ ಸಮಯ 7.15 ಕ್ಕೆ ಆರೋಪಿ ತನ್ನ ಬಾಬ್ತು ಜೆನ್ ಕಾರಿನಲ್ಲಿ ಅಲ್ಲಿಗೆ ಬಂದರು. ಅವರು ಬಂದ ನಂತರ ಪ್ರಾಸಾ-1 ರವರು ಮತ್ತು ಆರೋಪಿ ಕಕ್ಕೆ ಹೊಳೆ ಬಳಿ ಬೈದ ಬಗ್ಗೆ ಮಾತನಾಡುತ್ತಿದ್ದರು. ನಂತರ ಆರೋಪಿ ಪ್ರಾಸಾ-1 ರವರನ್ನು ಉದ್ದೇಶಿಸಿ ವಡ್ಡ ಸೂಳೆ ಮಗನೆ ನಿನ್ನ ಅಮ್ಮನ ಕೇಯ ನಿನ್ನನ್ನು ಬದುಕಲು ಬಿಡುವುದಿಲ್ಲ ತೆಗೆಯುತ್ತೇನೆ ಎಂದು

ಹೇಳಿ ತನ್ನ ಕಾರಿನಲ್ಲಿ ಇದ್ದ ಕೋವಿಯನ್ನು ತೆಗೆದುಕೊಂಡು ಬಂದು ಪ್ರಾಸಾ-1 ರವರ ಎದೆಗೆ ಗುಂಡು ಹಾರಿಸಿರುತ್ತಾರೆ. ಆರೋಪಿ ಪ್ರಾಸಾ-1 ರವರಿಗೆ ಗುಂಡು ಹಾರಿಸಿದ್ದರಿಂದ ಅವರ ಎದೆಗೆ ಗಾಯ ಆಗಿ ರಕ್ತ ಬಂದಿದ್ದು, ನಂತರ ಅವರು ಕೆಳಕ್ಕೆ ಬಿದ್ದರು.

ನಂತರ ನಾನು ಮತ್ತು ಪ್ರಾಸಾ-2 ರವರು ಪ್ರಾಸಾ-1 ರವರನ್ನು ಸೋಮವಾರಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆರೋಪಿ ಪ್ರಾಸಾ-1 ರವರಿಗೆ ಗುಂಡು ಹಾರಿಸಿದ್ದನ್ನು ನಾನು ಬೀದಿ ದೀಪದ ಸಹಾಯದಿಂದ ನೋಡಿರುತ್ತೇನೆ. ಆ ದಿನ ಆರೋಪಿ ಪ್ರಾಸಾ-1 ರವರಿಗೆ ಗುಂಡು ಹಾರಿಸಿದ ಕೋವಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಕೋವಿ ಆ ದಿನ ಆರೋಪಿ ಪ್ರಾಸಾ-1 ರವರಿಗೆ ಗುಂಡು ಹಾರಿಸಿದ ಕೋವಿ ಇರುತ್ತದೆ. ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ. ಅದೇ ರೀತಿ ಈಗ ನಾನು ನೋಡುತ್ತಿರುವ ಮು.ಮಾ. 2 ರಿಂದ 4 ಬಟ್ಟೆಗಳು ಆ ದಿನ ಪ್ರಾಸಾ-1 ರವರು ಕೃತ್ಯ ನಡೆದ ಸಂದರ್ಭದಲ್ಲಿ ಧರಿಸಿದ್ದ ಬಟ್ಟೆಗಳಿರುತ್ತವೆ. ಆ ದಿನ ಆರೋಪಿ ಬಂದ ಜೆನ್ ಕಾರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಫೋಟೋದಲ್ಲಿ ಕಾಣುತ್ತಿರುವ ಕಾರು ಆ ದಿನ ಆರೋಪಿ ಸ್ಥಳಕ್ಕೆ ಬಂದ ಕಾರು ಇರುತ್ತದೆ. ಸದರಿ ಫೋಟೋವನ್ನು ನಿಪಿ-4 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೇಳಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.